UASB
LIBRARY
Newspaper Clippings
Pg .1 Wednesday 04-08-2021 Jai Kisan




# ರೈತ ಮಕ್ಕಳ ಪ್ರಾಯೋಗಿಕ ಪರೀಕ್ಷೆ ರದ್ದು

**ಬೆಂಗಳೂರು:** ಕೊರೊನಾ ಹಿನ್ನೆಲೆಯಲ್ಲಿ ಕೃಷಿಕರ, ಕೃಷಿ ಕಾರ್ಮಿಕರ ಮಕ್ಕಳ ಕೋಟಾದಡಿ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಪ್ರಾಯೋಗಿಕ ಪರೀಕ್ಷೆಯನ್ನು ರದ್ದು ಮಾಡಲಾಗಿದೆ.

ಕೊರೊನಾ ಸೋಂಕು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವುದು ಕಷ್ಟ ಹೀಗಾಗಿ ಪ್ರಾಯೋಗಿಕ ಪರೀಕ್ಷೆ ರದ್ದು ಮಾಡ ಬೇಕೆಂದು ಕೃಷಿ ಮತ್ತು ಕೃಷಿ ಪೂರಕ ವಿಶ್ವವಿದ್ಯಾಲಯ ಸರ್ಕಾರಕ್ಕೆ ಮನವಿ ಮಾಡಿದ್ದು ಅದರಂತೆ ಸರ್ಕಾರ ಪ್ರಸ್ತಾವನೆ ಪರಿಶೀಲಿಸಿ, ಪ್ರಾಯೋಗಿಕ ಪರೀಕ್ಷೆ ರದ್ದು ಮಾಡಿದೆ.

ಪ್ರಾಯೋಗಿಕ ಪರೀಕ್ಷೆಯನ್ನು ಆನ್‌ಲೈನ್ ಮೂಲಕ ನಡೆಸಲು ಸಾಧ್ಯವಿಲ್ಲದ ಕಾರಣ 2021-22 ನೇ ಸಾಲಿಗೆ ಮಾತ್ರ ಅನ್ವಯಿಸುವಂತೆ ಪದವಿ ಪ್ರವೇಶಾತಿ ಕುರಿತಂತೆ ಕೃಷಿಕರ ಮಕ್ಕಳ ಕೋಟಾದಡಿ ಪ್ರವೇಶ ನೀಡಲು ನಡೆಸಲಾಗುವ ಪ್ರಾಯೋಗಿಕ ಪರೀಕ್ಷೆಯನ್ನು ರದ್ದು ಮಾಡಿದೆ. ಪರೀಕ್ಷೆ ಬದಲಾಗಿ ವಿಶೇಷ ನಿಯಮಗಳು, ಮಾರ್ಗಸೂಚಿಗಳು ರಚಿಸಿ ಪ್ರವೇಶಾತಿ ಪ್ರಕ್ರಿಯೆಯನ್ನು ನಡೆಸಲು ತೀರ್ಮಾನಿಸಿದೆ.

ಅರ್ಹ ಅಭ್ಯರ್ಥಿಗಳು ಅಗತ್ಯವಾಗಿ ಪರಿಶೀಲನೆಗೆ ಒದಗಿಸಬೇಕಾಗಿದ್ದ ಮೂಲ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆಯಾ ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ ಬರುವ ಜಿಲ್ಲೆಗಳ ಅಭ್ಯರ್ಥಿಗಳು ಆಯಾ ವಿವಿಯ ವೆಬ್‌ಸೈಟ್‌ಗೆ ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಬೇಕು ಎಂದು ಸೂಚಿಸಿದೆ.

ವಿವಿಗಳು ದಾಖಲಾತಿಗಳ ಪರಿಶೀಲನೆಯ ನಂತರ ಅರ್ಹತೆ ಪಡೆದ ಅಭ್ಯರ್ಥಿಗಳ ಪ್ರತ್ಯೇಕ ಪಟ್ಟಿ ತಯಾರಿಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಕಳು ಹಿಸಿಕೊಡಬೇಕು. ಪ್ರಕಟಿತ ಅಂಕಗಳ ಆಧಾರದ ಮೇಲೆ ಮೆರಿಟ್ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸುವುದು. ಬಿ.ಎಸ್ಸಿ ಮತ್ತು ತತ್ಸ ಮಾನ ಕೋರ್ಸ್‌ಗಳಲ್ಲಿ ಕೃಷಿಕರ ಮತ್ತು ಕೃಷಿ ಕಾರ್ಮಿ ಕರ ಮಕ್ಕಳ ಕೋಟಾವನ್ನು ಸರ್ಕಾರದ ಆದೇಶದಂತೆ ಭರ್ತಿ ಮಾಡಲಾಗುವುದು. 2021-22ನೇ ಸಾಲಿನ ಕೃಷಿಕರ ಮತ್ತು ಕೃಷಿ ಕಾರ್ಮಿಕರ ಮಕ್ಕಳ ಕೋಟಾ ದಡಿಯಲ್ಲಿ ಅರ್ಜಿ ಸಲ್ಲಿಸಲು ಯಾವುದೇ ಕನಿಷ್ಠ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ ಎಂದೂ ಆದೇಶದಲ್ಲಿ ತಿಳಿಸಿದೆ.

**ಸರ್ಕಾರಕ್ಕೆ ಮನವಿ ಸಲ್ಲಿಸಿದ ಕೃಷಿ ಮತ್ತು ಕೃಷಿ ಪೂರಕ ವಿಶ್ವವಿದ್ಯಾಲಯ**

**04-08-2021 Uv Pg 07**

For more information visit
University Library Website
Web - uasbagrilibindia.org
E-mail- librarian@uasbangalore.edu.in

**04-08-2021 Vv Pg 07**

# ರೈತರ ಮಕ್ಕಳಿಗೆ ಪ್ರಾಯೋಗಿಕ ಪರೀಕ್ಷೆ ರದ್ದು

**ಬೆಂಗಳೂರು:** ಕರೊನಾ ಸೋಂಕಿನ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ 2021-22ನೇ ಸಾಲಿನ ಪದವಿ ಕೋರ್ಸ್‌ಗೆ ಕೃಷಿ ಕಾರ್ಮಿಕರ ಮಕ್ಕಳ ಕೋಟಾದಡಿ ಪ್ರವೇಶ ನೀಡಲು ನಡೆಸುತ್ತಿದ್ದ ಪ್ರಯೋಗಿಕ ಪರೀಕ್ಷೆಯನ್ನು ರದ್ದು ಮಾಡಿದೆ. ಕರೊನಾ ಹಿನ್ನೆಲೆಯಲ್ಲಿ ಪ್ರಾಯೋಗಿಕ ಪರೀಕ್ಷೆ ರದ್ದು ಮಾಡಬೇಕೆಂದು ಕೃಷಿ ಮತ್ತು ಕೃಷಿ ಪೂರಕ ವಿಶ್ವವಿದ್ಯಾಲಯ ಸರ್ಕಾರಕ್ಕೆ ಮನವಿ ಮಾಡಿತ್ತು. ಪ್ರಸ್ತಾವನೆ ಪರಿಶೀಲಿಸಿದ್ದು, ಪ್ರಾಯೋಗಿಕ ಪರೀಕ್ಷೆಗಾಗಿ ಸಾವಿರಾರೂ ಮಕ್ಕಳು ಒಂದು ಕಡೆ ಸೇರುವುದು ಸರಿಯಲ್ಲ. ಪ್ರಾಯೋಗಿಕ ಪರೀಕ್ಷೆಯನ್ನು ಆನ್‌ಲೈನ್ ಮೂಲಕ ನಡೆಸಲು ಸಾಧ್ಯವಿಲ್ಲದ ಕಾರಣ 2021-22 ಸಾಲಿಗೆ ಮಾತ್ರ ಅನ್ವಯಿಸುವಂತೆ ಪರೀಕ್ಷೆಯನ್ನು ರದ್ದು ಮಾಡಿದೆ. ಪರೀಕ್ಷೆ ಬದಲಾಗಿ ವಿಶೇಷ ನಿಯಮಗಳು, ಮಾರ್ಗಸೂಚಿಗಳು ರಚಿಸಿ ಪ್ರವೇಶಾತಿ ಪ್ರಕ್ರಿಯೆಯನ್ನು ನಡೆಸಲು ತೀರ್ಮಾನಿಸಿದೆ.

UASB LIBRARY
Newspaper Clippings
Pg .2 Jai Kisan Wednesday 04--08-2021

## ಕೆಸಿಡಿಸಿಗೆ ಬಿಡುವಿಲ್ಲದ ಕೆಲಸ | ಆದಾಯದತ್ತ ನಿಗಮ

# ಕಾಂಪೋಸ್ಟ್ ಗೊಬ್ಬರಕ್ಕೆ ಬೇಡಿಕೆ

◆ಸಂಜೀವ ಡಿ ವಿ

**ಬೆಂಗಳೂರು:** ರಾಜ್ಯದಲ್ಲಿ ರೈತರು ಸುಸ್ಥಿರ ಕೃಷಿಯತ್ತ ಆಕರ್ಷಿತರಾಗುತ್ತಿದ್ದಂತೆ ಕಾಂಪೋಸ್ಟ್ ಗೊಬ್ಬರಕ್ಕೆ ಎಲ್ಲಿಲ್ಲದ ಬೇಡಿಕೆ ಬಂದಿದೆ. ಈವರೆಗೆ ಅನುಸರಿಸುತ್ತಿದ್ದ ರಾಸಾಯನಿಕ ಪದ್ಧತಿ ಬದಲು ಸಾವಯವ ಪದ್ಧತಿಗೆ ಹೆಚ್ಚಿನ ಆದ್ಯತೆ ನೀಡುತ್ತಿರುವುದರಿಂದ ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮದ (ಕೆಸಿಡಿಸಿ) ಗೊಬ್ಬರಕ್ಕೂ ಬೇಡಿಕೆ ದೊರೆತಿದೆ.

ದಿಗಂತ ವಿಶೇಷ

ಬೆಂಗಳೂರಿನಲ್ಲಿನ ಕಸ ಭೂ ಭರ್ತಿ ತಪ್ಪಿಸಲು ಹಾಗೂ ರೈತರಿಗೆ ನೇರವಾಗಿ ಸಾವಯವ ಗೊಬ್ಬರ ಒದಗಿಸಲು ಕೆಸಿಡಿಸಿ ಘನತ್ಯಾಜ್ಯದಿಂದ ಕಾಂಪೋಸ್ಟ್ ತಯಾರಿಸುತ್ತಿದೆ. ಬಿಬಿಎಂಪಿ ಪ್ರದೇಶಗಳಲ್ಲಿ ದೊರೆಯುವ ಘನತ್ಯಾಜ್ಯವನ್ನೇ ಕಚ್ಚಾ ವಸ್ತುವನ್ನಾಗಿ ಮಾಡಿಕೊಳ್ಳಲಾಗಿದೆ. ಇದಕ್ಕೆಂದೇ ನಿಗಮ 3 ಘಟಕಗಳಿಂದ ನಿತ್ಯ 50 ಟನ್ ಕಾಂಪೋಸ್ಟ್ ಗೊಬ್ಬರವನ್ನು ಉತ್ಪಾದಿಸುತ್ತಿದೆ.

ಈ ಗೊಬ್ಬರವನ್ನು ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಯ ರೈತರಿಗೆ ನೇರವಾಗಿ ತಲುಪಿಸಲಾಗುತ್ತಿದೆ. ಒಂದು ಮೆಟ್ರಿಕ್ ಟನ್ ಗೊಬ್ಬರಕ್ಕೆ 2,200 ರೂ. ದರವಿದ್ದು, ಖುದ್ದು ಘಟಕಕ್ಕೆ ಬಂದು ಒಯ್ಯುವವರಿಗೆ 200 ರೂ. ರಿಯಾಯಿತಿ ನೀಡಲಾಗುತ್ತದೆ. ೨



**ಗೊಬ್ಬರ ಉತ್ಪಾದನೆ, ಮಾರಾಟ ವಿವರ**

| ಆರ್ಥಿಕ ವರ್ಷ | ಉತ್ಪಾದನೆ★ | ಮಾರಾಟ★ |
|---|---|---|
| 2018-19 | 3,048 | 1,979 |
| 2019-20 | 9,837 | 11,449 |
| 2020-21 | 11,864 | 11,707 |
| 2021-22★★ | 1,471 | 826 |
| ಒಟ್ಟು | 26,221 | 25,963 |

★ಟನ್‌ಗಳಲ್ಲಿ ★★ಜುಲೈವರೆಗೆ

### ಸಿಟಿ ಕಾಂಪೋಸ್ಟ್ ಗೊಬ್ಬರ ಉಪಯೋಗ

◆ಪುಟ ೨

ಕಾಂಪೋಸ್ಟ್ ಗೊಬ್ಬರಕ್ಕೆ ಬೇಡಿಕೆ

೧ಜತೆಗೆ ನಿಗಮದಿಂದ ತಾಲೂಕು, ಜಿಲ್ಲೆಗಳಿಗೆ ರವಾನಿಸಬೇಕಿದ್ದರೆ ಪ್ರತಿ ಟನ್‌ಗೆ ಸಾಗಣೆ ವೆಚ್ಚವಾಗಿ 1,100 ರೂ. ಪಾವತಿಸಬೇಕು. ಸಾಗಣೆ ವೆಚ್ಚವನ್ನು ತಾಲ್ಲೂಕಿನ ಕೃಷಿ ನಿರ್ದೇಶಕರಿಗೆ ಪಾವತಿಸಿದರೆ ಅವರೇ ಗೊಬ್ಬರವನ್ನು ತಲುಪಿ ಸುವ ವ್ಯವಸ್ಥೆ ಮಾಡಲಿದ್ದಾರೆ ಎಂದು ಕೆಸಿಡಿಸಿ ಅಧಿಕಾರಿಯೊಬ್ಬರು ಹೊಸ ದಿಗಂತಕ್ಕೆ ತಿಳಿಸಿದರು.

**ಎಲ್ಲಾ ಜಿಲ್ಲೆಗಳಲ್ಲೂ ಲಭ್ಯ:** ಕಳೆದ ವರ್ಷದವರೆಗೆ ಮೈಸೂರು, ಶಿವಮೊಗ್ಗ, ಹಾಸನ, ಚಾಮರಾಜನಗರ, ದಾವಣಗೆರೆ, ಮಂಡ್ಯ ಹಾಗೂ ಗುಲ್ಬರ್ಗ ಜಿಲ್ಲೆಗಳಿಗೆ ಪ್ರಾಯೋಗಿಕವಾಗಿ ಗೊಬ್ಬರ ಪೂರೈಕೆ ಮಾಡಲಾಗುತ್ತಿತ್ತು. ರೈತರಿಂದ ಬೇಡಿಕೆ ಹೆಚ್ಚಿದ್ದರಿಂದ ಈಗ ಎಲ್ಲಾ ಜಿಲ್ಲೆಗಳಿಗೂ ಕಾಂಪೋಸ್ಟ್ ಗೊಬ್ಬರವನ್ನು ರವಾನಿ ಸಲಾಗುತ್ತಿದೆ. ಇದರಿಂದಾಗಿ ರಾಜಧಾನಿಯ ಘನತ್ಯಾಜ್ಯ ವಿಲೇವಾರಿಯಲ್ಲಿ ಸ್ಥಳೀಯ ಆಡಳಿತಕ್ಕೆ ಒಂದಿಷ್ಟು ರಿಲೀಫ್ ಸಿಕ್ಕಂತಾಗಿದೆ.

> **ರಾಜ್ಯದಲ್ಲಿ ಪ್ರಾಯೋಗಿಕವಾಗಿ 6 ಜಿಲ್ಲೆಗೆ ಗೊಬ್ಬರ ಪೂರೈಕೆ ಮಾಡಲಾಗುತ್ತಿದೆ. ಈಗ ರಾಜ್ಯದ ಯಾವುದೇ ಮೂಲೆಯ ರೈತರು ಗೊಬ್ಬರಕ್ಕೆ ಬೇಡಿಕೆ ಇಟ್ಟರೆ ಅವರಿಗೆ ನಿಗಮದಿಂದ ಪೂರೈಕೆ ಮಾಡಲಾಗುವುದು.**
> ■ ಎಸ್. ಮಹದೇವಯ್ಯ, ಕೆಸಿಡಿಸಿ ಅಧ್ಯಕ್ಷ

### ಸಿಟಿ ಕಾಂಪೋಸ್ಟ್ ಗೊಬ್ಬರ ಉಪಯೋಗ

- ಮಣ್ಣಿನಲ್ಲಿ ನೀರನ್ನು ಹಿಡಿದಿಡುವ ಶಕ್ತಿ ಹೆಚ್ಚಳ
- ಬೆಳೆಗಳಿಗೆ ಅವಶ್ಯವಿರುವ ಪೋಷಕಾಂಶ ಪೂರೈಕೆ
- ಮಣ್ಣಿನಲ್ಲಿ ಸಾವಯವ ವಸ್ತುವಿನ ಪರಿಮಾಣ ಏರಿಕೆ
- ಶೇ.10ಕ್ಕಿಂತ ಹೆಚ್ಚು ರಸಗೊಬ್ಬರದ ವೆಚ್ಚ ಕಡಿತ

UASB LIBRARY

Newspaper Clippings

Pg .3 Jai Kisan Wednesday 04--08-2021

# ಬ್ಯಾಡಗಿ ಅಚ್ಚರಿ ವಹಿವಾಟು

## 2,000 ಕೋಟಿ ರೂ. ವ್ಯವಹಾರ | ಲಾಕ್‌ಡೌನ್ ಮಧ್ಯೆಯೂ ದಾಖಲೆ ಮಾರಾಟ | 12 ಕೋಟಿ ಮಾರುಕಟ್ಟೆ ಶುಲ್ಕ ಸಂಗ್ರಹ

■ **ಗಣೇಶ ಅರ್ಕಾಚಾರಿ** ಬ್ಯಾಡಗಿ(ಹಾವೇರಿ)

ಕೊರೊನಾ ಹಾವಳಿ, ಲಾಕ್‌ಡೌನ್, ಎಪಿಎಂಸಿ ಕಾಯಿದೆಗೆ ತಿದ್ದುಪಡಿಯಂಥ ಸಂದಿಗ್ಧ ಪರಿಸ್ಥಿತಿ ನಡುವೆಯೂ ಸ್ಥಳೀಯ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಸಕ್ತ ವರ್ಷ ಒಟ್ಟು 2 ಸಾವಿರ ಕೋಟಿ ರೂ. ಮೆಣಸಿನಕಾಯಿ ವಹಿವಾಟು ನಡೆಸುವ ಮೂಲಕ ಎಲ್ಲರ ಲೆಕ್ಕಾಚಾರ ಹುಸಿಗೊಳಿಸಿ ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಉತ್ತುಂಗಕ್ಕೇರಿದೆ.



ಕಳೆದ 2017-18ರಲ್ಲಿ 920 ಕೋಟಿ ರೂ. (10.41 ಲಕ್ಷ ಕ್ವಿಂಟಲ್ ಆವಕ) ವಹಿವಾಟು ನಡೆದಿದ್ದರೆ, 2018-19 ರಲ್ಲಿ 1009 ಕೋಟಿ ರೂ. (13.96 ಲಕ್ಷ ಕ್ವಿಂಟಲ್ ಆವಕ), 2019-20ರಲ್ಲಿ 1260 ಕೋಟಿ ರೂ. (8.42 ಲಕ್ಷ ಕ್ವಿಂಟಲ್ ಆವಕ) ಪ್ರಸಕ್ತ ವರ್ಷ 2020-21ರಲ್ಲಿ 2000 ಕೋಟಿ ರೂ. (11.09 ಲಕ್ಷ ಕ್ವಿಂಟಲ್ ಆವಕ) ವಹಿವಾಟು ನಡೆದಿದ್ದು, ಇದರಿಂದ ಒಟ್ಟಾರೆ 12 ಕೋಟಿ ರೂ. ಮಾರುಕಟ್ಟೆ ಶುಲ್ಕ ಸಂಗ್ರಹವಾಗಿದೆ.

**ಸೆಸ್ ಇಳಿಕೆಯಾದರೂ 12 ಕೋಟಿ ಶುಲ್ಕ:** ಮುಕ್ತ ಮಾರುಕಟ್ಟೆ ಘೋಷಣೆ ಬಳಿಕ ವ್ಯಾಪಾರಸ್ಥರನ್ನು ಸಂತೈಸುವ ನಿಟ್ಟಿನಲ್ಲಿ ಸರಕಾರ 1.50 ರೂ. (ಪ್ರತಿ 100 ರೂ.ಗಳಿಗೆ) ಇದ್ದ ಮಾರುಕಟ್ಟೆ ಶುಲ್ಕವನ್ನು ಕೇವಲ 0.60 ಪೈಸೆಗೆ ಇಳಿಸಿತು. ಹೀಗಾಗಿ ಸ್ಥಳೀಯ ಮಾರುಕಟ್ಟೆ ಶುಲ್ಕ ಸಂಗ್ರಹಕ್ಕೆ ಕಡಿವಾಣ ಬಿದ್ದಿತು. ಇಲ್ಲದಿದ್ದರೆ ಮಾರುಕಟ್ಟೆ ಶುಲ್ಕ 30 ಕೋಟಿ ರೂ. ಸಮೀಪಿಸುತ್ತಿತ್ತು ಎಂಬುದು ಮಾರುಕಟ್ಟೆ ತಜ್ಞರ ಲೆಕ್ಕಾಚಾರ.

ಬ್ಯಾಡಗಿ ಮಾರುಕಟ್ಟೆಯಲ್ಲಿ ಕಳೆದೊಂದು ದಶಕದಿಂದ ದಾಖಲೆಗಳದ್ದೇ ಅಬ್ಬರ ನಡೆದಿದೆ.

**ರೈತರ ಸೆಳೆದ ಸ್ಪರ್ಧಾತ್ಮಕ ದರ:** ಮಾರುಕಟ್ಟೆಯಲ್ಲಿನ ಸ್ಪರ್ಧಾತ್ಮಕ ದರ, ಪಾರದರ್ಶಕ ತೂಕ, ಇ-ಟೆಂಡರ್ ವ್ಯವಸ್ಥೆ, ರೈತರಿಗೆ ಹಣ ಪಾವತಿಸುವಲ್ಲಿ ವರ್ತಕರ ಪ್ರಾಮಾಣಿಕತೆಯಿಂದಾಗಿ ನೆರೆಯ ಆಂಧ್ರ ಮತ್ತು ತೆಲಂಗಾಣ ರಾಜ್ಯದ ರೈತರು ಸುಮಾರು 850 ಕಿ.ಮೀ.ದೂರದಿಂದ ಮಾರುಕಟ್ಟೆಗೆ ಓಡೋಡಿ ಬರುವಂತೆ ಮಾಡಿದೆ.

04-08-2021 Vk Pg 07

04-08-2021 Vk Pg 01

# ಒಂದು ಜಿಲ್ಲೆ ಒಂದು ಉತ್ಪನ್ನ ಆಸಕ್ತಿಯೂ ಇಲ್ಲ, ಸಾಲ ಸಿಕ್ತಿಲ್ಲ

## ಹಳ್ಳ ಹಿಡಿಯುವತ್ತ ಕೇಂದ್ರದ ಮಹತ್ವಾಕಾಂಕ್ಷಿ ಯೋಜನೆ

■ **ಶತಿಧರ್ ಎಸ್.ದೋಣಿಹಕ್ಲು** ತುಮಕೂರು
shashidonihaklu@gmail.com

'ಒಂದು ಜಿಲ್ಲೆ ಒಂದು ಉತ್ಪನ್ನ' ಯೋಜನೆ ಬಗ್ಗೆ ಜನರಿಗೂ ಹೆಚ್ಚು ಆಸಕ್ತಿ ಇಲ್ಲ, ಬ್ಯಾಂಕ್‌ಗಳು ಕೂಡಾ ಸಾಲ ನೀಡಲು ಮುಂದೆ ಬರುತ್ತಿಲ್ಲ. ಹೀಗಾಗಿ ಕೇಂದ್ರ ಸರಕಾರದ ಮಹತ್ವಾಕಾಂಕ್ಷಿ ಯೋಜನೆ ಹಳ್ಳ ಹಿಡಿದಿದೆ.

ರಾಜ್ಯದಲ್ಲಿ ಇದುವರೆಗೆ ಸಲ್ಲಿಕೆ ಆಗಿರುವ ಒಟ್ಟು ಅರ್ಜಿಗಳು ಬರೀ 350. ಇದರಲ್ಲಿ ಜಿಲ್ಲಾ ಮಟ್ಟದ ಸಮಿತಿಗಳು 180 ಅರ್ಜಿಗಳನ್ನು ಬ್ಯಾಂಕ್‌ಗಳಿಗೆ ಶಿಫಾರಸು ಮಾಡಿವೆ. ಬ್ಯಾಂಕ್‌ಗಳು ಸಾಲ ಕೊಟ್ಟಿದ್ದು 10 ಮಂದಿಗೆ ಮಾತ್ರ!

**ಹಲವು ಜಿಲ್ಲೆಗಳಲ್ಲಿ ಶೂನ್ಯ:** ತುಮಕೂರು ಜಿಲ್ಲೆ ಸಲ್ಲಿಕೆಯಾದ 17 ಅರ್ಜಿಗಳಲ್ಲಿ 8 ಅರ್ಜಿ ಸಾಲಕ್ಕೆ ಶಿಫಾರಸುಗೊಂಡಿವೆ. ಅವುಗಳಲ್ಲಿ 1 ಅರ್ಜಿ ತಿರಸ್ಕೃತಗೊಂಡಿದೆ. ಬೆಂಗಳೂರು ಗ್ರಾಮಾಂತರದ 8 ಅರ್ಜಿಗಳ ಪೈಕಿ, 4 ಅರ್ಜಿ, ಚಿಕ್ಕಬಳ್ಳಾಪುರದ ಆರು ಅರ್ಜಿಗಳನ್ನು ಬ್ಯಾಂಕ್‌ಗೆ ಶಿಫಾರಸು ಮಾಡಲಾಗಿದೆ. ಕೋಲಾರದಲ್ಲಿ 14 ಅರ್ಜಿಗಳ ಪೈಕಿ ಸಾಲ ಸಿಕ್ಕಿದ್ದು ಒಬ್ಬರಿಗಷ್ಟೇ. ಬಹುತೇಕ ಜಿಲ್ಲೆಗಳಲ್ಲಿ ಇದುವರೆಗೆ ಯೋಜನೆ ಫಲ ಪಡೆದವರ ಸಂಖ್ಯೆ ಶೂನ್ಯ! ಬ್ಯಾಂಕ್‌ಗಳು ದಾಖಲೆಗಳ ಹೆಸರಿನಲ್ಲಿ ಸತಾಯಿಸುತ್ತಿರುವುದರಿಂದ ಅರ್ಜಿದಾರರೇ ಬ್ಯಾಂಕ್‌ಗಳಿಂದ ವಿಮುಖರಾಗುತ್ತಿದ್ದಾರೆ ಎಂಬ ಮಾಹಿತಿ ಇದೆ.





### ಏನಿದು ಒಂದು ಜಿಲ್ಲೆ ಒಂದು ಉತ್ಪನ್ನ?

ಆಯಾ ಜಿಲ್ಲೆಗಳಲ್ಲಿ ಹೆಚ್ಚು ಬೆಳೆಯುವ ಬೆಳೆಗಳು ಮತ್ತಿತರ ಉತ್ಪನ್ನಗಳ ಆಧಾರಿತ ಸಂಸ್ಕರಣಾ ಘಟಕ ತೆರೆಯಲು ಶೇ.35ರಷ್ಟು ಸಹಾಯಧನದೊಂದಿಗೆ (ಗರಿಷ್ಠ 10 ಲಕ್ಷ ರೂ) ಸಾಲ ಸೌಲಭ್ಯ ನೀಡುವುದು ಯೋಜನೆಯಾಗಿದೆ.

### ಸಾಲ ನೀಡಿಕೆಗೆ ಹಿಂದೇಟು ಯಾಕೆ?

- ಬ್ಯಾಂಕ್ ಮತ್ತು ಯೋಜನೆಗೆ ಸಂಬಂಧಪಟ್ಟ ಇಲಾಖೆಗಳ ನಡುವೆ ಸಮನ್ವಯತೆ ಕೊರತೆ.
- ಹೆಚ್ಚಿನ ಬ್ಯಾಂಕ್ ಅಧಿಕಾರಿಗಳಿಗೆ ಯೋಜನೆ ಬಗ್ಗೆಯೇ ಅರಿವಿಲ್ಲ.
- ಕೊರೊನಾ ಕಾರಣದಿಂದ ಬಹುತೇಕ ಬ್ಯಾಂಕ್‌ಗಳು ಸಾಲ ಪ್ರಕ್ರಿಯೆ ನಿಧಾನಗೊಳಿಸಿವೆ.
- ಉದ್ಯಮದ ಯಶಸ್ಸು, ಸಾಲ ಮರುಪಾವತಿ ಸಾಧ್ಯತೆ ಬಗ್ಗೆ ಸಂಶಯ.

**ಈಗಾಗಲೇ ಜಿಲ್ಲಾಮಟ್ಟದ ಸಮಿತಿಗಳು ಹಾಗೂ ಸಂಬಂಧಪಟ್ಟ ಇಲಾಖೆಗಳು ಉತ್ತಮ ಕಾರ್ಯ ಮಾಡುತ್ತಿವೆ. ಬ್ಯಾಂಕ್‌ಗಳು ಹೆಚ್ಚಿನ ಆಸಕ್ತಿ ತೋರಬೇಕು.**

**-ಚಂದ್ರಕುಮಾರ್** ಸಹಾಯಕ ನಿರ್ದೇಶಕರು, ಕೆವಿಕೆ (ಕೆಎಪಿಐಸಿ)

ಮಹತ್ವದ ಯೋಜನೆಯ ವೈಫಲ್ಯ | ಸಂಪಾದಕೀಯ »08

UASB LIBRARY
Newspaper Clippings
Pg .4 Jai Kisan Wednesday 04--08-2021

# New frog species in Western Ghats

## It has been named after plant geneticist Deepak Pental

SPECIAL CORRESPONDENT
MYSURU

Researchers from the University of Delhi have named a newly discovered frog species after the former Vice-Chancellor and renowned plant geneticist Deepak Pental.

The new species was discovered from the globally recognised Western Ghats biodiversity hotspot that extends along the southwest coast of the Indian peninsula.

The discovery was made during a comprehensive study on a considerably large, common, yet confusing group of Indian frogs – genus Minervarya (common name: Minervaryan frogs). The study was carried out over a period of nearly 10 years, according to S.D. Biju, Head of the Department of Environmental Studies, and Sonali Garg, a post-doctoral researcher at the University of Delhi.



*Minervarya Pentali* is endemic to the southern Western Ghats. ▪ SONALI GARG

Their findings and description of the species are published in a scientific article titled 'DNA Barcoding and Systematic Review of Minervaryan Frogs (Dicroglossidae: Minervarya) of Peninsular India: Resolution of a taxonomic conundrum with description of a new species' in the international journal *Asian Herpetological Research*.

CONTINUED ON ▸ PAGE 5

# New frog species in Western Ghats

The newly discovered species, named *Minervarya Pentali*, is endemic to the southern Western Ghats.

"We discovered it on wayside vegetation at multiple localities in Kerala and Tamil Nadu while surveying amphibians during the monsoon season. This species is also among the smallest known Minervaryan frogs, which is probably one of the reasons it was overlooked until now," says Dr. Garg, the lead author of the study.

"It is a great privilege to name a frog species after Prof. Deepak Pental in appreciation of his tremendous support and encouragement for setting up of Systematics Lab at University of Delhi, where research leading to the discovery and description of nearly one-fourth of all known Indian amphibians has been carried out," said Prof. Biju.

**Multiple criteria**

The new species – belonging to the family Dicroglossidae – was identified based on multiple criteria, such as external morphology, DNA and calling pattern. The study also resolved the identity and taxonomic status of all known members of the genus from peninsular India, in addition to clarifying the geographical ranges of species, and providing numerous new distribution records based on morphologically and genetically identified samples from a vast region, according to the researchers.

The researchers have called for special conservation efforts for the region, which is known for its rich biodiversity.

04-08-2021
Hindu Pg 01

UASB LIBRARY

Newspaper Clippings
Pg .5 Jai Kisan Wednesday 04--08-2021



# ಕೃಷಿ ವಾಣಿಜ್ಯ

skeditorkv@gmail.com

**ಕೇಂದ್ರ ಸರಕಾರ ತೊಗರಿಬೇಳೆ, ಉದ್ದಿನಬೇಳೆ ಹಾಗೂ ಹೆಸರುಬೇಳೆಗಳ ಮುಕ್ತ ಆಮದಿಗೆ ಅನುಮತಿ ನೀಡಿರುವದು ರೈತರಿಗೆ ನುಂಗಲಾರದ ತುತ್ತಾಗಿದೆ. ಇದರಿಂದಾಗಿ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಬೇಳೆಕಾಳು ಬೆಳೆಗಳ ಬಿತ್ತನೆ ಕ್ಷೇತ್ರ ಇಳಿಮುಖವಾಗುವದೆಂದು ಹೇಳಲಾಗಿದೆ. ಹೀಗಾಗಿ ಮುಕ್ತ ಆಮದು ನೀತಿಯನ್ನು ಕೈ ಬಿಡಬೇಕೆಂದು ಒತ್ತಾಯಿಸಲಾಗುತ್ತಿದೆ.**

## ಬೇಳೆಕಾಳು ಮುಕ್ತ ಆಮದಿಗೆ ಕೇಂದ್ರ ಸರಕಾರದ ಅನುಮತಿ

# ವಿದೇಶಿ ಸಂಗ ಸ್ವದೇಶಿ ಅಭಿಮಾನ ಭಂಗ

ಕೇಂದ್ರ ಸರಕಾರ ಪ್ರಸಕ್ತ ಸಾಲಿನ ಅಕ್ಟೋಬರ್ 31ರವರೆಗೆ ಕೆಲವು ಬೇಳೆಕಾಳುಗಳನ್ನು ಮುಕ್ತವಾಗಿ ಆಮದು ಮಾಡಿಕೊಳ್ಳಲು ಅನುಮತಿ ನೀಡಿದೆ. ಬೆಲೆ ಏರಿಕೆ ತಡೆಗಟ್ಟಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಲಾಗಿದ್ದರೂ ಇದರ ಪರಿಣಾಮವಾಗಿ ಮುಂಗಾರು ಹಂಗಾಮಿನ ಬೇಳೆಕಾಳು ಬೆಳೆಯ ಹೆಕ್ಟೇರ್‌ವಾರು ಕ್ಷೇತ್ರ ಕಡಿಮೆಯಾಗಿದೆ.

ಸದ್ಯಕ್ಕೆತೊಗರಿಬೇಳೆ,ಉದ್ದಿನಬೇಳೆ,ಹೆಸರುಬೇಳೆಗಳನ್ನು ಅಧಿಕ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಕಳೆದ ವರ್ಷ ಮುಂಗಾರು ಹಂಗಾಮಿನ ಬೇಳೆಕಾಳು ಬೆಳೆಗಳ ಹೆಕ್ಟೇರ್‌ವಾರು ಬೆಳೆ ಕ್ಷೇತ್ರ 140 ಲಕ್ಷ ಹೆಕ್ಟೇರ್‌ದಷ್ಟಿತ್ತು. ಈ ವರ್ಷ ಕೇವಲ 107.87 ಲಕ್ಷ ಹೆಕ್ಟೇರ್ ಕ್ಷೇತ್ರದಲ್ಲಿ ಬಿತ್ತನೆ ಪೂರ್ಣಗೊಂಡಿದೆ. ಇದಕ್ಕೆ ಮಳೆ ಕೊರತೆಯೇ ಕಾರಣ ಎಂದು ಹೇಳಲಾಗಿದ್ದರೂ, ಕೇಂದ್ರ ಸರಕಾರದ ಉದಾರ ಆಮದು ನೀತಿಯೂ ಕೊಂಚ ಪರಿಣಾಮ ಬೀರಿದೆ ಎಂದು ವಿಶ್ಲೇಷಿಸಲಾಗಿದೆ. ರಾಜಸ್ಥಾನ, ಮಧ್ಯಪ್ರದೇಶಗಳಲ್ಲಿ ಒಟ್ಟು 13 ಲಕ್ಷ ಹೆಕ್ಟೇರ್‌ದಷ್ಟು ಕಡಿಮೆಯಾಗಿದೆ. ಇದ್ದುದರಲ್ಲಿ ಮಹಾರಾಷ್ಟ್ರ, ಕರ್ನಾಟಕಗಳಲ್ಲಿ ಪರವಾಗಿಲ್ಲ ಎನ್ನುವಂತಹ ಸ್ಥಿತಿ ಇದೆ. ಒಟ್ಟಾರೆಯಾಗಿ ಮುಂಗಾರು ಹಂಗಾಮಿನ ಬೇಳೆಕಾಳು ಬೆಳೆಗಳ ಹೆಕ್ಟೇರುವಾರು ಕ್ಷೇತ್ರದ ಪ್ರಮಾಣ ಶೇ.10-15ರಷ್ಟು ಇಳಿಕೆಯಾಗುವ ಸಂಭವ ಇದೆ ಎಂದು ಅಂದಾಜಿಸಲಾಗಿದೆ.

## ಬೆಲೆ ಕುಸಿತ

ಅಕ್ಟೋಬರ್ ಹೊತ್ತಿಗೆ ಈ ಮೇಲೆ ಹೇಳಲಾದ ಮೂರು ಬೇಳೆಕಾಳುಗಳು ಹೆಚ್ಚಿನ ಪ್ರಮಾಣದಲ್ಲಿ ಆಮದಾಗಿ ಬಂದರೆ ದೇಶೀಯ ಮಾರುಕಟ್ಟೆಯಲ್ಲಿ ಬೇಳೆ ಬೆಳೆಗಳಾದ ತೊಗರಿ, ಉದ್ದು, ಹೆಸರು ಬೆಲೆ ಗಣನೀಯವಾಗಿ ಇಳಿಕೆಯಾಗುವ ಭೀತಿ ಎದುರಾಗಿದೆ. ಮುಖ್ಯವಾಗಿ ಈ ಮೂರು ಬೆಳೆಗಳ ಸುಗ್ಗಿ ಕಾಲದಲ್ಲೇ ಆಮದಾದರೆ ಈ ಸಮಸ್ಯೆ ತಲೆದೋರಲಿದೆ. ಆದ್ದರಿಂದ ಸರಕಾರ ತನ್ನ ಆಮದು ನೀತಿಯನ್ನು ಬದಲಾಯಿಸುವದು ಒಳ್ಳೆಯದೆಂದು ಕೃಷಿ ತಜ್ಞರು ಸಲಹೆ ನೀಡಿದ್ದಾರೆ. ಜೊತೆಗೆ ಕಳಪೆ ದರ್ಜೆಯ ಬೇಳೆಕಾಳುಗಳು ಕೂಡ ಆಮದಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಹೀಗಾಗಿ ದೇಶದ ಪ್ರಮುಖ ಬಂದರುಗಳಲ್ಲಿ ತೀವ್ರ ನಿಗಾ ಇರಿಸಬೇಕಾದ ಅವಶ್ಯಕತೆ ಇದೆ ಎಂದು ಹೇಳಲಾಗುತ್ತಿದೆ. ಇನ್ನು ಬೇಳೆಕಾಳುಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿ ಕೃತಕ ಅಭಾವ ಸೃಷ್ಟಿಸುವವರ ಹಾವಳಿಯೂ ಹೆಚ್ಚಲಿದೆ. ಸರಕಾರ ಇದರತ್ತ ಕೂಡ ಗಮನಹರಿಸಬೇಕಿದೆ.

## ಅಸಮರ್ಪಕ ನೀತಿ

ಬೇಳೆಕಾಳುಗಳ ಆಮದು ಹೆಚ್ಚಿಸಲು ಮುಂದಾಗುವದಕ್ಕಿಂತ ಅವುಗಳ ಉತ್ಪಾದನೆ ಹೆಚ್ಚಿಸಲು ಸರಕಾರ ಕ್ರಮ ಕೈಗೊಂಡರೆ ಒಳ್ಳೆಯದು. ಆದರೆ ಹೀಗಾಗುತ್ತಿಲ್ಲ. ಸರಕಾರದ ಅಸಮರ್ಪಕ ನೀತಿಯ ಜೊತೆಗೆ ಹವಾಮಾನ ವೈಪರೀತ್ಯ ಕೂಡ ಬೇಳೆಕಾಳುಗಳ ಉತ್ಪಾದನೆಯ ಮೇಲೆ ಪರಿಣಾಮ ಬೀರುತ್ತಿದೆ. ಕಳೆದ ವರ್ಷ ಹವಾಮಾನ ವೈಪರೀತ್ಯದಿಂದಾಗಿ ಹೆಸರು, ಉದ್ದು ಬೆಳೆ ಹಾನಿಯಾಗಿತ್ತು. ಆದ್ದರಿಂದ ಈ ವರ್ಷ ರೈತರು ಸೋಯಾಬೀನ್, ಹತ್ತಿ ಬಿತ್ತನೆಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಒಂದೆಡೆ ಬೇಳೆಕಾಳುಗಳ ಉತ್ಪಾದನೆ ಹೆಚ್ಚಿಸುವ ಮಾತಾಡುತ್ತಲೇ ಅದರ ಆಮದು ಹೆಚ್ಚಳಕ್ಕೂ ಅನುಮತಿ ನೀಡುವ ಸರಕಾರದ ದ್ವಂದ್ವ ನೀತಿ ಆಘಾತಕಾರಿಯಾಗಿದೆ ಎಂಬುದು ರೈತರು ಹಾಗೂ ಕೃಷಿತಜ್ಞರ ಅಂಬೋಣ.



ಒಟ್ಟಿನಲ್ಲಿ ಬೇಳೆಕಾಳುಗಳ ಮುಕ್ತ ಆಮದಿಗೆ ಅನುಮತಿ ನೀಡಿರುವದರಿಂದ ಸರಕಾರ ಜೇನುಗೂಡಿಗೆ ಕಲ್ಲೆಸೆದಂತಾಗಿದೆ. ಇದು ಆಹಾರ ಹಣದುಬ್ಬರವನ್ನು ನಿಯಂತ್ರಿಸುವ ಕ್ರಮ ಎಂದು ಸರಕಾರ ಎಷ್ಟೇ ಸಮರ್ಥಿಸಿಕೊಂಡರೂ ಇದರಿಂದಾಗಿ ಬೆಲೆ ಕುಸಿದು ರೈತರಿಗೆ ಅನ್ಯಾಯವಾಗುತ್ತದೆಂಬ ವಾದವನ್ನು ಅಲ್ಲಗಳೆಯುವಂತಿಲ್ಲ. ಆದ್ದರಿಂದ ಸರಕಾರ ತೊಗರಿ, ಉದ್ದು, ಹೆಸರು ಬೆಳೆಗಳ ಸುಗ್ಗಿ ಸಮಯದಲ್ಲಿ ಆಮದನ್ನು ನಿಲ್ಲಿಸಬೇಕಿದೆ. ಅಂದಾಗ ಮಾತ್ರ ಈ ಮೂರು ಬೆಳೆಗಳನ್ನು ಬೆಳೆಯುವ ರೈತರು ಸಂಕಷ್ಟಕ್ಕೀಡಾಗುವದು ತಪ್ಪುತ್ತದೆ.